

ತಕ್ಕಂತೆ ಅವು ರೂಪುಗೊಳ್ಳತೊಡಗಿದವು. ಇನ್ನು ಕೋಲಿನ ಕೈಹಿಡಿಯು ಕಲೆಗಾರನ ಕಲ್ಪನಾವಿಲಾಸದ ಆಡುಂಬೊಲವಾಗಿತ್ತು. ಸಿಂಹದ ತಲೆ, ಮೀನಿನ ಮೈ, ಗರುಡನ ತಲೆ, ಸರ್ಪದ ಬಳುಕು ಹೀಗೆ ಹೊಸ ಹೊಸ ರೂಪಗಳಲ್ಲಿ ಅವು ಕಾಣಿಸಿಕೊಂಡವು. ಇಂದು ಅವುಗಳನ್ನು ಬ್ರಿಟಿಷ್ ಮ್ಯೂಸಿಯಂನಲ್ಲಿ ನೋಡಬಹುದು. ಅಂದರೆ ಆ ಕಾಲದಲ್ಲಿ ಅವುಗಳ ಪ್ರಭಾವವನ್ನು ನಾವು ಊಹಿಸಬಹುದು.

ಇವನ್ನೆಲ್ಲ ಗಮನಿಸಿಯೋ ಏನೋ ನಮ್ಮ ದೇಶದಲ್ಲೂ ಹಿಂದೆ ತಮ್ಮ ಪಟ್ಟದಕತ್ತಿಯನ್ನು ಹಿಡಿದು ಛಾಯಾಚಿತ್ರವನ್ನು ತೆಗೆಸಿಕೊಳ್ಳುತ್ತಿದ್ದ ಮಹಾರಾಜರುಗಳು, ಅನಂತರದ ದಿನಗಳಲ್ಲಿ ಒಳ್ಳೆಯ ಕೆತ್ತನೆಯ ಕೆಲಸ ಮಾಡಿದ ಊರುಗೋಲನ್ನು ಹಿಡಿದು ಛಾಯಾಚಿತ್ರವನ್ನು ತೆಗೆಸಿಕೊಳ್ಳಲು ಪ್ರಾರಂಭಿಸಿಬಿಟ್ಟರು. ‘ಭಾರತದ ಈ ಮಹಾರಾಜರುಗಳು ಊರುಗೋಲು ಹಿಡಿದು ಛಾಯಾಚಿತ್ರವನ್ನು ತೆಗೆಸಿಕೊಳ್ಳಲು ಬ್ರಿಟಿಷ್ ಅಧಿಕಾರಿಗಳ ಆಜ್ಞೆಯೇ ಕಾರಣ; ತಮ್ಮ ರಾಜ– ರಾಣಿಯರ ಮುಂದೆ ಇವರು ಕತ್ತಿಯನ್ನು ಪ್ರದರ್ಶಿಸಬಾರದು ಎಂಬುದು ಅವರ ಮನದಲ್ಲಿತ್ತು’ ಎಂದು ನನ್ನ ಸ್ನೇಹಿತನೊಬ್ಬ ಬಹಳ ಹಿಂದೆ ನನಗೆ ತಿಳಿಸಿದ್ದ. ಆದರೆ ಇದುವರೆಗೂ ನನಗೆ ಈ ಬಗ್ಗೆ ಖಚಿತ ಮಾಹಿತಿ ಸಿಕ್ಕಿಲ್ಲ. ಹಾಗಾಗಿ ಇದು ‘ಇದ್ದರೂ ಇರಬಹುದು, ಇದನ್ನು ಪರಿಶೀಲಿಸಿ ನೋಡಬೇಕು’ ಎಂಬ ವರ್ಗಕ್ಕೆ ವರ್ಗಾಯಿಸಬಹುದು. ಆದರೆ ಬ್ರಿಟಿಷರ ಕಾರ್ಯಗಳನ್ನು ಗಮನಿಸಿದವರಿಗೆ ಅವರು ಹೀಗೆ ಮಾಡಿದ್ದರೆ ಆಶ್ಚರ್ಯವೇನಿಲ್ಲ ಎನ್ನಿಸುವುದು ಸಹಜ. ಅಷ್ಟೇ ಏಕೆ, ನಮ್ಮ ಮೈಸೂರಿನ ರಾಜರ್ಷಿಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬೆತ್ತವನ್ನು ಹಿಡಿದೇ ತಮ್ಮ ಛಾಯಾಚಿತ್ರವನ್ನು ತೆಗೆಸಿಕೊಂಡಿರುವುದು ಎಲ್ಲೆಡೆ ಕಂಡುಬರುತ್ತದೆ. ಅದಕ್ಕೆ ನನ್ನ ವಿವರಣೆಯೇ ಬೇರೆ! ಅವರು ಎಂದೂ ಕತ್ತಿಯನ್ನು ಹಿಡಿದು ಜನರನ್ನು ಹೆದರಿಸಿ, ಬೆದರಿಸಿ ತಮ್ಮ ರಾಜ್ಯಭಾರವನ್ನು ನಿರ್ವಹಿಸಲಿಲ್ಲ. ಅವರು ತಮ್ಮ ರಾಜ್ಯಭಾರದ ಸಂದರ್ಭದಲ್ಲಿ ಜನರ ಪ್ರೀತಿಯನ್ನು ಗಳಿಸಿ, ಜನರಿಗೆ ಬೇಕಾದ್ದನ್ನು, ಅವರಿಗೆ ಅನುಕೂಲವಾಗುವ ಅನೇಕ ವಿಚಾರಗಳನ್ನು ಅನುಷ್ಠಾನ ಮಾಡಿ, ಮೈಸೂರನ್ನು ಮಾದರಿರಾಜ್ಯವನ್ನಾಗಿ ಮಾಡಿದ್ದರು. ಹಾಗಾಗಿ

